ದೇವರಾಜನಿಗೆ ಏನನ್ನಿಸಿತೋ, ಹುಚ್ಚನ ಹಾಗೆ ಉಷೆಯನ್ನು ತಬ್ಬಿಕೊಂಡುಬಿಟ್ಟ. 'ಬಿಡು ದೇವ್ರೂ...' ಅಂತ ಅಳುದನಿಯಲ್ಲೇ ಕೊಸರಾಡಿದಳು. ಆದರೆ ದೇವರಾಜ ಬಿಡದೆ ಅವಳ ಕಂಬನಿ ಒರೆಸಿ, ತಲೆ ನೇವರಿಸಿ, ಪಚಪಚನೆ ಕೆನ್ನೆ ಕಚ್ಚಿಬಿಟ್ಟ. ಆಮೇಲೆ ತಪ್ಪು ಮಾಡಿಬಿಟ್ಟೆ ಅನ್ನಿಸ್ತು. ಉಷಾ ಕೊಸರಿಕೊಂಡು ಬಿಡಿಸಿಕೊಂಡು ಹೋಗಿ ಸ್ವಲ್ಪ ದೂರ ನಿಂತುಬಿಟ್ಟಳು. ಸೂರ್ಯಾಸ್ತಕ್ಕೆ ಕೆಲ ಗಳಿಗೆಗಳಿದ್ದುದರಿಂದ ಇಡೀ ಕಡಲು ಹೊಸ ಬಣ್ಣ ತಾಳಿದ್ದು, ಅದರ ಪ್ರತಿಫಲ ಉಷೆಯ ಮುಖದಲ್ಲೂ. ಈಗಷ್ಟೇ ಕಂಬನಿ ಒರೆಸಿದ್ದ ಮುಖದ ಬಿಳಿಯ ಹಾಲು ಗಲ್ಲದ ಮೇಲೆ ತೆಳುವಾದ ಪದರವೊಂದನ್ನು ಸೃಷ್ಟಿಸಿ, ಅವಳು ತನ್ನ ವಯಸ್ಸಿಗಿಂತಲೂ ಹೆಚ್ಚು ಪ್ರೌಢವಾಗಿ ಕಾಣುತ್ತಿದ್ದಳು. ದೇವರಾಜ ಅವಳನ್ನೇ ದಿಟ್ಟಿಸಿ ನೋಡಹತ್ತಿದ. ಅವನಿಗೆ ಭಯವೋ, ಪ್ರೀತಿಯೋ ಉಂಟಾಯಿತು. ಹಿಂದೆಂದೂ ಆಗಿರದ ಅನುಭವಗಳನ್ನು ತಮ್ಮ ಪುಟಾಣಿ ಹೃದಯ ಪಾತ್ರೆಯಲ್ಲಿ ತುಂಬಿಕೊಳ್ಳಲು ಬರದೆ– ಅಸ್ತವ್ಯಸ್ತವಾಗಿ ಚೆಲ್ಲಿಕೊಂಡವರಂತೆ ಇಬ್ಬರೂ ಎಷ್ಟೋ ಹೊತ್ತು ಹಾಗೆಯೇ ಇದ್ದರು. ಮತ್ತೊಮ್ಮೆ ಚುಂಬಿಸಲಿ ಎಂದಿರಬೇಕು – ಮಾನವಂತ ಸೂರ್ಯ–ಸ್ವಲ್ಪ ಬೇಗನೇ ಮುಳುಗಿ ಅವಿತು ನೋಡಹತ್ತಿದ. ಆದರೆ ದೇವರಾಜ ಒಮ್ಮೆ ಕಚ್ಚಿದುದನ್ನೇ ಆ ಅನುಭವದ ವಿದ್ಯುತ್ ಪ್ರವಾಹದಲ್ಲಿ ಆಘಾತಗೊಂಡವನಂತೆ – ಚೇತರಿಸಿಕೊಳ್ಳಲಾಗದೆ ಮಂಡಿ ಒಳಗೆ ತಲೆ ತೂರಿಸಿ ಕುಳಿತುಬಿಟ್ಟ. "ಹೋಗೋಣ ದೇವ್..." ಅಂದಳು. ದೇವರಾಜ ಅವಳನ್ನು ಹಿಂಬಾಲಿಸಿದ. "ಕಾಲೇಜಿಗೆ ಯಾಕೆ ಬರಲಿಲ್ಲ? ಗಾಬರಿಯಾಗಿ ನಿಮ್ಮ ಮನೆಗೆ ಹೋಗಿ ಸುಮಿತ್ರಕ್ಕನ್ನ ಕೇಳಿ ಇಲ್ಲಿಗೆ ನಿನ್ನನ್ನು ಹುಡುಕಿ ಬಂದದ್ದು. ನನಗೆ ಗೊತ್ತಲ್ಲ, ನೀನು ಕಂಡಿರುವುದು ಈ ಊರಿನಲ್ಲಿ ಆ ಹಳೆ ದೋಣಿ ಒಂದೇ ಅಂತ..." ಆಕೆ ನಗಿಸಲು ಯತ್ನಿಸಿದಳು. ದೇವರಾಜ ನಗಲಿಲ್ಲ.

★★★

ದೇವರಾಜ ಅಂದಿನ ದಿನಚರಿ ಪುಸ್ತಕದಲ್ಲಿ ಒಂದು ಮಾತು ಬರೆದ : "ಉಷಾ ನಾಯಕ್ ತುಂಬಾ ಒಳ್ಳೆಯ ಹುಡುಗಿ." ಆಕಸ್ಮಿಕವಾಗಿ ಅಕ್ಕ ಓದಿದಳು. ಭಾವ ರೇಗಿಸಿದರು: "ನಾನು ಆಫೀಸಿನಿಂದ ಡೈರಿ ತಂದುಕೊಟ್ಟಿದ್ದು ಕಾಲೇಜಿನಲ್ಲಿ ಏನಾದ್ರೂ ನೋಟ್ಸ್ ಮಾಡಿಕೊಳ್ಳಲಿ ಅಂತ. ಇದಕ್ಕಲ್ಲ."

ಮರುದಿನ ಕಾಲೇಜಿಗೆ ಹೋದಾಗ ಯಾರೋ ಇಬ್ಬರು ಹುಡುಗರು ಇವನನ್ನೇ ದಿಟ್ಟಿಸಿ ನೋಡುತ್ತ ಅದೇನೋ ಕೊಂಕಣಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಅದರಲ್ಲಿ ದೇವರಾಜನಿಗೆ ಎರಡು ಶಬ್ದಗಳು ಮಾತ್ರ ಸ್ಪಷ್ಟವಾಗಿ ಕೇಳಿಸಿದವು. ಒಂದು : ಬೀಚ್, ಇನ್ನೊಂದು : ರೋಮಾನ್ಸ್. ಸಿಟ್ಟು ಎಲ್ಲಿತ್ತೋ, ಒಮ್ಮೆ ಅವರನ್ನು ನುಂಗುವವನಂತೆ ದಿಟ್ಟಿಸಿ ನೋಡಿ ದುಡುದುಡು ತರಗತಿಯ ಒಳಗೆ ಹೋಗಿಬಿಟ್ಟ ದೇವರಾಜ. ಆದರೆ ಎದೆಯಲ್ಲಿ ಮಾತ್ರ ಯಾಕೋ ಭಯ ಇಣುಕಿತ್ತು.

ಎಳೆಜೀವಗಳ ಪ್ರೀತಿಗೆ ಆಕಾಶ ತುಂಬುವ ಉದ್ವೇಗವಿರುತ್ತದೆ. ಕಾರವಾರದ ಸುಂದರ ನಿಸರ್ಗದಲ್ಲಿ ದೇವರಾಜ ಕೂಡಾ ಮತ್ತಷ್ಟು ಸುಂದರನಾಗಿಬಿಟ್ಟ. ಉಷಾ ನಾಯಕ್ ಎಂಬ ಪುಟ್ಟ ಹುಡುಗಿ ಅವನನ್ನು ಯಾಕೆ ಪ್ರೀತಿಸಿದಳೋ? ಅವನ ಒರಟು ಭಾಷೆಯನ್ನೋ, ಮೂಡಲ್ಕುಣಿಗಲ್ ಕೆರೆ ನೋಡಲಿಕ್ಕೊಂದ್ಮೈಭೋಗ ಮೂಡೀ ಬರ್ತಾನೆ ಚಂದೀರಾಮ ಎಂದು ಆತ ಕಾಲೇಜ್ ಡೇನಲ್ಲಿ ಹಾಡಿದ ಜನಪದ ಗೀತೆಯ ಸೊಗಡನ್ನೋ, ನಿರ್ಮಲತೆ ಮತ್ತು ಮುಗ್ಧತೆ ಬೆರೆತುಕೊಂಡ ದೇವರಾಜನ ಮನಸ್ಸನ್ನೋ. ಅಂತೂ ಒಂದು ದಿನ ಬೀಚ್‌ನಲ್ಲಿ